12.40 ಪಿ.ಎಂ.

ಶ್ರೀ ಜೆ.ಹೆಚ್. ಪಟೇಲ್ :— ಈಗ ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ತಮ್ಮ ಸೀಟಿಗೆ ಹೋಗಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ನಿಜವಾಗಲೂ ಅವರು ಹೇಳುವುದು ಸರಿ. ನಾನು ಕೊಳ್ಳೇಗಾಲ ಮತ್ತು ಚಾಮರಾಜನಗರ ಅಲ್ಲಿಗೆ ಹೋಗಿದ್ದೆ. ರಸ್ತೆಗಳು ಬಹಳಷ್ಟು ಕೆಟ್ಟಿವೆ. ಮೂರು ಜನ ಕೂಡಿ, ಮುಖ್ಯಮಂತ್ರಿಗಳು ಉಪ ಮುಖ್ಯಮಂತ್ರಿಗಳು ವಾಟಾಳ್ ನಾಗರಾಜ್‌ರವರು ಮಹದೇಶ್ವರ ಬೆಟ್ಟದಲ್ಲಿ ಅಡ್ಡಾಡಿ ಬರಲಿ. ಅವರು ವೀರಪ್ಪನನ್ನು ಹಿಡಿದಹಾಗೆ ಆಗುತ್ತದೆ ರಸ್ತೆಯನ್ನು ನೋಡಿದಹಾಗೆ ಆಗುತ್ತದೆ. ಆಮೇಲೆ ಪ್ರಸ್ತಾಪ ಮಾಡಿದರೆ ತಾವು ಒಪ್ಪಿಗೆ ಕೊಟ್ಟಹಾಗೆ ಆಗುತ್ತದೆ.

ಶ್ರೀ ಸಿದ್ಧರಾಮಯ್ಯ :— ವೀರಪ್ಪನಿರುವ ಕಡೆ ನಾವು ಬಹಳಷ್ಟು ಸಲ ಹೋಗಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರು ಹೋಗಿ ನೋಡಿಕೊಂಡು ಬರಲಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಾನು ಹೋಗಿದ್ದೇನೆ ಅದಕ್ಕಾಗಿ ಹೇಳುತ್ತಿದ್ದೇನೆ. ಆ ಬಾರ್ಡರ್‌ಗೆ ಹೋಗಿ ಸ್ವತಹಃ ನೋಡಿದ್ದೇನೆ.

ಅಧ್ಯಕ್ಷರು :— ಪೋಲೀಸರ ಕೈಯಲ್ಲಿ ವೀರಪ್ಪನನ್ನು ಹಿಡಿಯಲಿಕ್ಕೆ ಆಗಲಿಲ್ಲ. ನಾನು ಎಲ್ಲಾ ಪಾರ್ಟಿಯವರದ್ದು ಒಂದೊಂದು ಟೀಮ್ ಮಾಡಿ ನಾನೇ ಕಳುಹಿಸುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ವೆಲ್‌ನಿಂದಲೇ ಮಾತನಾಡುತ್ತಿದ್ದರು)

ಶ್ರೀ ಉಮೇಶ್ ವಿ. ಕತ್ತಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಏನು ಹೇಳುತ್ತಿದ್ದಾರೆ ಪುಣಜನೂರು ಮತ್ತು ಚಾಮರಾಜನಗರ ರಸ್ತೆ ಕೆಟ್ಟಿದೆ ಅದು ಸರ್ಕಾರದ ಗಮನಕ್ಕೆ ಬಂದಿದೆ. ಕೂಡಲೇ ಅದರ ಬಗ್ಗೆ ಸಭೆ ಮಾಡಿ ಯಾವ ರೀತಿಯಾಗಿ ಜೂನ್‌ದೊಳಗೆ ಆ ಕೆಲಸ ಮುಗಿಸಬೇಕೆನ್ನುವ ತೀರ್ಮಾನಕ್ಕೆ ಮಾವು ನೀವು ಕೂಡಿ ಬರೋಣ ಎಂದು ಹೇಳಿ ತಮ್ಮ ಮುಖಾಂತರ ತಿಳಿಸುತ್ತೇನೆ. ಮಾನ್ಯ ಸದಸ್ಯರು ಧರಣಿ ಬಿಟ್ಟು ತಮ್ಮ ಸೀಟಿಗೆ ಹೋಗಬೇಕೆಂದು ನಾನು ವಿನಂತಿಮಾಡಿಕೊಳ್ಳುತ್ತೇನೆ.

(ಫ) ಹುಣಸೂರು ಕ್ಷೇತ್ರದಲ್ಲಿನ ಹೊಗೆಸೊಪ್ಪು ಬೆಳೆಗಾರರ ಸಮಸ್ಯೆ

+ ಶ್ರೀ ಜಿ.ಟಿ. ದೇವೇಗೌಡ (ಹುಣಸೂರು) :— ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಹೊಗೆಸೊಪ್ಪಿನ ಬೆಳೆಗಾರರ ಜೀವನ್ಮರಣದ ಪ್ರಶ್ನೆಯಿದೆ. ಅದನ್ನು ತಮ್ಮ ಗಮನಕ್ಕೆ ತಂದಾಗ, ಅದರ ಬಗ್ಗೆ ಪ್ರಸ್ತಾಪ ಮಾಡಲು ತಾವು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ನಾನು ನಮ್ಮ ಬಡ ರೈತರ ಪರವಾಗಿ ತಮಗೆ ಹೃದಯಪೂರ್ವಕ ಕೃತಜ್ಞತೆಗಳನ್ನು

ಸಲ್ಲಿಸುತ್ತಾ ಇವತ್ತು ಹುಣಸೂರು ತಂಬಾಕು ಮಂಡಳಿಯವರು ಸ್ಥಳೀಯ ಪತ್ರಿಕೆ ಅಂದೋಳನ ಮತ್ತು ಮೈಸೂರಿನ ಪತ್ರಿಕೆಯಲ್ಲಿ 31ನೇ ತಾರೀಖಿಗೆ ಹೊಗೆಸೊಪ್ಪಿನ ಮಾರುಕಟ್ಟೆ ಮುಗಿದಿದೆ, 1ನೇ ತಾರೀಖಿನಿಂದ ವ್ಯಾಪಾರವಿಲ್ಲವೆಂದು ಈಗಾಗಲೇ ಅವರು ತಿಳಿಸಿದ್ದಾರೆ. ಅದಕ್ಕೋಸ್ಕರ ಸುಮಾರು 65 ಸಾವಿರ ರೈತರು ಅಲ್ಲಿ ವ್ಯವಹಾರ ಮಾಡುತ್ತಿದ್ದಾರೆ. ಸುಮಾರು 150 ಕೋಟಿ ರೂಪಾಯಿ ವಹಿವಾಟು ನಡೆಸತಕ್ಕ ಮಾರುಕಟ್ಟೆ ನನ್ನ ಕ್ಷೇತ್ರ ಒಂದೇ ಅಲ್ಲ. ಪಿರಿಯಾಪಟ್ಟಣ, ಕೆ.ಆರ್. ನಗರ, ಹೆಗ್ಗಡದೇವನಕೋಟೆ ನಾಲ್ಕು ತಾಲ್ಲೂಕುಗಳಿಗೆ ಸಂಬಂಧಪಟ್ಟಂತೆ ಇಲ್ಲಿ ಅಧಿಕೃತವಾಗಿ ಬೆಳೆದಿರತಕ್ಕ ಹೊಗೆಸೊಪ್ಪಿನ ಪೈಕಿ 34 ಮಿಲಿಯನ್ ಕೆ.ಜಿ. ಮಾತ್ರ ಮಾರಾಟವಾಗಿದೆ. ಅಧಿಕೃತವಾಗಿ ಬೆಳೆದಿರತಕ್ಕ ಇನ್ನು 10 ಮಿಲಿಯನ್ ಹೊಗೆಸೊಪ್ಪು ಮಾರಾಟವಾಗದೆ ಹಾಗೆಯೇ ಉಳಿದಿದೆ. ಅದು ಅಲ್ಲದೆ ಅನಧಿಕೃತವಾಗಿ 10 ಸಾವಿರ ಮಿಲಿಯನ್ ಕೆ.ಜಿ. ಹೊಗೆಸೊಪ್ಪು ಕೂಡ ಇದೆ. 20 ಸಾವಿರ ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ಕಳೆದ ಅಧಿವೇಶನದಲ್ಲಿ ನಾನು ಪ್ರಪ್ರಥಮವಾಗಿ ಪ್ರಸ್ತಾಪ ಮಾಡಿದ್ದೆ. ಅವರಿಗೆ ಎಸ್‌ಓಪಿ ಗೊಬ್ಬರವನ್ನು ಕೂಡ ಕೊಡಲಿಕ್ಕೆ ಸಾಧ್ಯವಾಗಲಿಲ್ಲ. ರೈತರು ಬೇರೆ ಕಡೆಯಿಂದ ಗೊಬ್ಬರವನ್ನು ತರಬೇಕಾದರೆ ಹೆಂಡತಿ ಮಕ್ಕಳ ಒಡವೆಗಳನ್ನು ಗಿರವಿಯಿಟ್ಟು ತಾಳಿಯೊಂದನ್ನು ಬಿಟ್ಟು ಎಲ್ಲಾ ಒಡವೆಗಳನ್ನು ಗಿರವಿ ಇಟ್ಟಿದ್ದಾರೆ. ಹಗಲು ರಾತ್ರಿ ಅವರು ಅಳುತ್ತಿದ್ದಾರೆ ಆ ಗೋಳನ್ನು ನೋಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳಬಹುದು. ಜನವರಿ 11ನೇ ತಾರೀಖು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಿಗಳು ಅಲ್ಲಿಗೆ ಬಂದು ಸಂಕ್ರಾಂತಿಯ ಹಬ್ಬದೊಳಗಡೆ ಇದಕ್ಕೆ ಪರಿಹಾರವನ್ನು ಕಂಡುಹಿಡಿಯುತ್ತೇನೆಂದು ಹೇಳಿದ್ದರು. ಹಾಗೆ ಹೇಳಿದ್ದರೂ ಕೂಡ ಸಂಕ್ರಾಂತಿ ಆಯಿತು ಶಿವರಾತ್ರಿ ಆಯಿತು, ಉಗಾದಿ ಆಯಿತು ಇನ್ನು ರೈತರ ಕಷ್ಟ ಪರಿಹಾರವಾಗಿಲ್ಲ. ಉಳಿದಿರತಕ್ಕ ಹೊಗೆಸೊಪ್ಪನ್ನು ಅವರು ಸಂಪೂರ್ಣವಾಗಿ ಕೊಂಡುಕೊಳ್ಳತಕ್ಕ ವ್ಯವಸ್ಥೆಯನ್ನು ಮಾಡದೇ ಹೋದರೆ 20 ಸಾವಿರ ರೈತರು ರೊಚ್ಚಿಗಿದ್ದಿದ್ದಾರೆ. ಅಲ್ಲಿನ ಲೋಕಸಭಾ ಸದಸ್ಯರ ಮೇಲೆ ಶಾಸಕರ ಮೇಲೆ ನಂಬಿಕೆ ಹೋಗಿದೆ. ಜನರು ಹೋರಾಟ ಮಾಡುತ್ತಿದ್ದಾರೆ. ಹೊಗೆಸೊಪ್ಪಿನ ಮಂಡಳಿಯ ಮೇಲೆ ಪ್ರತಿಭಟನೆ ಮಾಡಿದ್ದಾರೆ. ಲೋಕಸಭಾ ಸದಸ್ಯರ ರೈತರು ಬೆಳೆದಿರತಕ್ಕ ಹೊಗೆಸೊಪ್ಪನ್ನು ಕೊಂಡುಕೊಳ್ಳತಕ್ಕ ತೀರ್ಮಾನವನ್ನು ಕೈಗೊಳ್ಳದೆ ಹೋದರೆ 31ನೇ ತಾರೀಖು ಹೊಗೆಸೊಪ್ಪು ಮಂಡಳಿಯನ್ನು ಬಂದ್ ಮಾಡಿದರೆ ಖರೀದಿದಾರರು ಮತ್ತೆ ವಾಪಸ್ಸು ಹೋದರೆ ಆಂಧ್ರಪ್ರದೇಶದ ಮುಖ್ಯಮಂತ್ರಿಗಳಾದ ಚಂದ್ರಬಾಬು ನಾಯ್ಡುರವರು 27ನೇ ತಾರೀಖು ಸಭೆಯನ್ನು ಕರೆದಿದ್ದಾರೆ. ಆಂಧ್ರಪ್ರದೇಶದಲ್ಲಿ ಹೊಗೆಸೊಪ್ಪಿನ ಮಾರುಕಟ್ಟೆ ಪ್ರಾರಂಭವಾದರೆ, ಖರೀದಿದಾರರು ಅಲ್ಲಿಗೆ ಹೋದರೆ ಮತ್ತೆ ಇಲ್ಲಿಗೆ ಅವರು ಬರುವುದಿಲ್ಲ. ಖರೀದಿದಾರರು ಇವತ್ತು ಹೊಗೆಸೊಪ್ಪನ್ನು ಕೊಂಡುಕೊಳ್ಳುವುದಕ್ಕೆ ತಯಾರಿದ್ದಾರೆ. ಅವರಿಗೆ ಕಾರ್ಡನ್ನು ಕೊಟ್ಟು ವಿತರಣೆ ಮಾಡಿಸತಕ್ಕ ಕೆಲಸವನ್ನು ಮಾಡದೇ ಹೋದರೆ 20 ಸಾವಿರ ರೈತ ಕುಟುಂಬಗಳು ಹಾಳಾಗಿವೆ. ಅವರು ಸಾಲ ಪಡೆದಿದ್ದಾರೆ ಬಡ್ಡಿಯನ್ನು ಕಟ್ಟಲಿಕ್ಕೆ ಆಗುತ್ತಿಲ್ಲ. ಅವರು ಗಿರವಿ ಇಟ್ಟಿರತಕ್ಕ ಒಡವೆಗಳನ್ನು ಬಿಡಿಸಿಕೊಳ್ಳಲಿಕ್ಕೆ ಆಗುತ್ತಿಲ್ಲ. ಹಳ್ಳಿಗಳಿಗೆ ನಾವು ಹೋಗುವುದಕ್ಕೆ ಆಗುತ್ತಿಲ್ಲ. ನಮ್ಮ ಸರ್ಕಾರ ರೈತರ

ಪರವಾಗಿ ನಿಲ್ಲಬೇಕು. ಕೇಂದ್ರದ ವಾಣಿಜ್ಯ ಮಂತ್ರಿಗಳು ನಮಗೆ ಭರವಸೆಯನ್ನು ಕೂಡ ಕೊಟ್ಟಿದ್ದರು. ಅವರು ಇದರಲ್ಲಿ ವಿಫಲರಾಗಿದ್ದಾರೆ. ಯಾವುದೇ ಪಕ್ಷದ ಸದಸ್ಯರು ಇರಲಿ, ಇಡೀ ಸದನ ಮತ್ತು ಸರ್ಕಾರ ನಮ್ಮ ರೈತರನ್ನು ರಕ್ಷಣೆ ಮಾಡಬೇಕು. ಬೆಳೆದಿರತಕ್ಕ ಹೊಗೆಸೊಪ್ಪನ್ನು ಕೊಂಡುಕೊಳ್ಳಬೇಕು. ಕಳೆದಬಾರಿ 7 ಸಾವಿರ ಮಿಲಿಯನ್ ಕೆ.ಜಿ. ಹೆಚ್ಚಿಗೆ ಬೆಳೆದಿದ್ದನ್ನು ಕೊಂಡುಕೊಂಡಿದ್ದಾರೆ. ಈ ಸಾರಿ ಇರತಕ್ಕ ಹೊಗೆಸೊಪ್ಪು ಎಲ್ಲವನ್ನೂ ಕೊಂಡುಕೊಂಡು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಹೃದಯಪೂರ್ವಕವಾಗಿ ಪ್ರಾರ್ಥನೆಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕ ವಿಚಾರ ಸರಿಯಾಗಿದೆ. ಅಲ್ಲಿ ಹೊಗೆಸೊಪ್ಪನ್ನು ಪ್ರತಿ ವರ್ಷ ಬೆಳೆಯುತ್ತಿದ್ದಾರೆ. ಅಧಿಕೃತವಾಗಿ ಬೆಳೆಯತಕ್ಕವರು ಇದ್ದಾರೆ ಅನಧಿಕೃತವಾಗಿ ಬೆಳೆಯತಕ್ಕವರೂ ಸಹ ಇದ್ದಾರೆ. ಲೈಸೆನ್ಸ್‌ದಾರರು ಬೆಳೆಯುತ್ತಾರೆ ಲೈಸೆನ್ಸ್ ಇಲ್ಲದಿರತಕ್ಕವರು ಸಹ ಬೆಳೆಯುತ್ತಾರೆ. ಕಳೆದ ಎರಡು ಮೂರು ವರ್ಷಗಳಲ್ಲಿ ಹೊಗೆಸೊಪ್ಪಿನ ಬೆಲೆ ಸ್ವಲ್ಪ ಸಾಧಾರಣವಾಗಿತ್ತೆಂದು ಹೇಳಿ ಬೇರೆಯವರೆಲ್ಲ ಹೊಗೆಸೊಪ್ಪನ್ನು ಬೆಳೆದಿದ್ದಾರೆ. ಯಾರು ಲೈಸೆನ್ಸ್‌ದಾರರು ಇದ್ದಾರೆ ಅವರ ಹೊಗೆಸೊಪ್ಪು ಮಾರಾಟವಾಗಿದೆ. ಲೈಸೆನ್ಸ್‌ದಾರರು ಯಾರು ಇಲ್ಲ ಯಾರು ಅನಧಿಕೃತವಾಗಿ ಬೆಳೆದಿದ್ದಾರೆ ಅವರ ಹೊಗೆಸೊಪ್ಪು ಮಾರಾಟವಾಗಿಲ್ಲ. ಅದಕ್ಕೆ ಇದನ್ನು ಕೇಂದ್ರಸರ್ಕಾರ ತೆಗೆದುಕೊಳ್ಳುವಂತಹ ವ್ಯವಸ್ಥೆ ಮಾಡಿಸಬೇಕು. ತಂಬಾಕು ಬೋರ್ಡ್‌ನಿಂದ ಅಥವಾ ಬೇರೆ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕದ್ದು ಕೇಂದ್ರ ಸರ್ಕಾರ ಇದನ್ನು ಮಾಡಬೇಕೆಂದು ಹೇಳಿ ಅನೇಕ ಸಾರಿ ನಾವು ಒತ್ತಾಯವನ್ನು ಕೂಡ ಮಾಡಿದ್ದೇವೆ. ಒಂದು ನಿಯೋಗ ಕೂಡ ಹೋಗಿತ್ತು. ಶ್ರೀಮಾನ್ ವೆಂಕಟೇಶ್‌ರವರು, ಕೃಷಿ ಸಚಿವರಾದ ಬೈರೇಗೌಡರು ಆ ಭಾಗದ ಹುಣಸೂರು, ಪಿರಿಯಾಪಟ್ಟಣ, ಕೆ.ಆರ್.ನಗರ, ಹೆಗ್ಗಡದೇವನ ಕೋಟೆ ಆ ಭಾಗದವರು ಕೂಡ ಹೋಗಿದ್ದರು. ಮತ್ತೆ ವಾಣಿಜ್ಯ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಜನವರಿ 11ನೇ ತಾರೀಖು ಅಲ್ಲಿಗೆ ಹೋಗಿ ಇಲ್ಲಿ ಬೆಳೆದಿರತಕ್ಕ ಎಲ್ಲಾ ಹೊಗೆಸೊಪ್ಪನ್ನು ಕೂಡ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ ಮಾಡುತ್ತೇನೆಂದು ಅವರೂ ಕೂಡ ಮಾತು ಕೊಟ್ಟಿದ್ದರು. ಅದು ಆದ ಮೇಲೆ ಏಕೋ ಈಗ ಬರೀ ಲೈಸೆನ್ಸ್‌ದಾರರ ಹೊಗೆಸೊಪ್ಪು ಮಾತ್ರ ತೆಗೆದುಕೊಂಡಿದ್ದಾರೆ ಅನಧಿಕೃತವಾಗಿ ಬೆಳೆದಿರತಕ್ಕವರ ಹೊಗೆಸೊಪ್ಪನ್ನು ಬಿಟ್ಟುಬಿಟ್ಟಿದ್ದಾರೆ. ಅದನ್ನು ಕೊಂಡುಕೊಳ್ಳದೇ ಹೋದರೆ, ರೈತರು ಬಹಳಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಹೊಗೆಸೊಪ್ಪು ಬೆಳೆಯಲಿಕ್ಕೆ ಸಾಲ ಮಾಡಿದ್ದಾರೆ, ಗೊಬ್ಬರಕ್ಕೆ ಸಾಲ ಮಾಡಿದ್ದಾರೆ. ಹೊಗೆಸೊಪ್ಪು ಕೊಂಡುಕೊಳ್ಳದಿದ್ದರೆ ರೈತರು ಬಹಳ ಕಷ್ಟಕ್ಕೆ ಸಿಕ್ಕಿಹಾಕಿಕೊಳ್ಳುತ್ತಾರೆ. ಅದನ್ನು ಬಹಳ ದಿವಸ ಇಟ್ಟುಕೊಳ್ಳುವುದಕ್ಕೂ ಕೂಡ ಆಗುವುದಿಲ್ಲ. ಇಟ್ಟುಕೊಳ್ಳಲಿಕ್ಕೆ ವ್ಯವಸ್ಥೆಯಿಲ್ಲ ಆದಷ್ಟು ಜಾಗ್ರತೆ ಕೇಂದ್ರಸರ್ಕಾರ ಕೊಂಡುಕೊಳ್ಳಲಿಕ್ಕೆ ಅವರು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು. ತಂಬಾಕು ಮಂಡಳಿಯವರು ಕೊಂಡುಕೊಳ್ಳಬೇಕು. ಅವರಿಗೆ ಹೇಳಿ ಕೊಂಡುಕೊಳ್ಳುವುದಕ್ಕೆ ವ್ಯವಸ್ಥೆ

ಮಾಡಬೇಕು. ಆದಕ್ಕೆ ನಮ್ಮ ಕೃಷಿಮಂತ್ರಿಗಳು ಆ ಭಾಗದ ವೆಂಕಟೇಶ್ವರವರು ಎಲ್ಲಾ ಹೋಗಿ ಕೇಂದ್ರದ ವಾಣಿಜ್ಯ ಮಂತ್ರಿಗಳನ್ನು ಭೇಟಿ ಮಾಡಿ ಮತ್ತೊಮ್ಮೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡುತ್ತೇವೆ. ರಾಜ್ಯಸರ್ಕಾರ ಏನೂ ಮಾಡತಕ್ಕ ಪರಿಸ್ಥಿತಿಯಲ್ಲಿ ಇಲ್ಲ. ನಿಯೋಗ ಕಳುಹಿಸಿ ಮತ್ತೆ ಒತ್ತಡ ತರತಕ್ಕ ಕೆಲಸವನ್ನು ಮಾಡಿಸುತ್ತೇವೆ ಎನ್ನತಕ್ಕ ಮಾತನ್ನು ಅವರಿಗೆ ತಿಳಿಸಲಿಕ್ಕೆ ಬಯಸುತ್ತೇನೆ.

ಶ್ರೀ ಮಲ್ಲಿಕಾರ್ಜು ಖರ್ಗೆ (ವಿರೋಧಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚಿಗೆ ಕಾಲಾವಕಾಶ ತೆಗೆದುಕೊಳ್ಳುವುದಿಲ್ಲ.

ಅಧ್ಯಕ್ಷರು :— ಒಂದು ನಿಮಿಷ. ಮಾನ್ಯ ನಂಜೇಗೌಡರು ಜೀರೋ ಆವರ್ ಆಯಿತಾ ಎಂದು ಕೇಳಿದರು. ನಮ್ಮಲ್ಲಿ ಜೀರೋ ಅವರನ್ನು ಹೇಗೆ ಉಪಯೋಗ ಮಾಡಿಕೊಳ್ಳುತ್ತೇವೆಂದರೆ, ಮೊದಲು 351 ಇರುತ್ತಿತ್ತು. ಕಾಲಿಂಗ್ ಅಟೆನ್ಷನ್‌ನಲ್ಲಿ ನಿಯಮ 310 ರಲ್ಲಿ ಅದರಲ್ಲೂ ಸ್ಕೋಪ್ ಇರುತ್ತಿತ್ತು. ನಮ್ಮ ರೂಲ್ಸ್‌ನಲ್ಲಿ ನಿಯಮ 312 ಇಲ್ಲ. ನಿಯಮ 351 ರಂತೆ ನಾವು ಅಲೌ ಮಾಡುತ್ತಿಲ್ಲ. ಕಾಲಿಂಗ್ ಅಟೆನ್ಷನ್‌ನಲ್ಲಿ ದಿವಸಕ್ಕೆ ಒಂದೆರಡು ಮ್ಯಾಟರ್ಸ್ ಮಾತ್ರ ಬರುತ್ತದೆ. ಮೆನ್ಷನ್ ಮಾಡತಕ್ಕದ್ದು ನೋಟೀಸ್ ಇತ್ತು. 17 ನೋಟೀಸ್‌ಗಳನ್ನು we have covered now. The intention is only to provide opportunity to all the members. we are just calling it as Zero hour.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅನುದಾನ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಸ್ಥಾಪನೆಯಾಗಿ ಸುಮಾರು 9 ವರ್ಷಗಳಾಯಿತು. ಹೆಚ್ಚುಕಡಿಮೆ ಅಷ್ಟು ಆಗಿದೆ. ಈ 9 ವರ್ಷಗಳಲ್ಲಿ ಪ್ರತಿ ವರ್ಷ ಈವೊಂದು ರೀಜನಲ್ ಇಂಬ್ಯಾಲೆನ್ಸ್‌ನ್ನು ತೆಗೆದುಹಾಕಬೇಂದು ಹೇಳಿ ಇದಕ್ಕೆ ಸಾಕಷ್ಟು ಹಣ ಕೊಡಬೇಕು, ಮತ್ತು ಯಾವ್ಯಾವ ಕ್ಷೇತ್ರದಲ್ಲಿ ಕೊರತೆಯಿದೆ ಆ ಕ್ಷೇತ್ರದಲ್ಲಿ ಕೆಲಸವನ್ನು ತೆಗೆದುಕೊಳ್ಳಬೇಕೆನ್ನತಕ್ಕ ಒಂದು ಸೈಂಟಿಫಿಕ್ ರಿಪೋರ್ಟ್ ಆಧಾರದ ಮೇಲೆ ಇದನ್ನು ಮಾಡಲಾಗಿದೆ. ಹಿಂದೆ ಶ್ರೀಮಾನ್ ಧರ್ಮಸಿಂಗ್‌ರವರ ನೇತೃತ್ವದಲ್ಲಿ ಒಂದು ರಿಪೋರ್ಟ್ ತಯಾರಾಗಿದೆ. ಆ ರಿಪೋರ್ಟ್‌ನ ಆಧಾರದ ಮೇಲೆ ಪ್ರತಿವರ್ಷ ಎಷ್ಟು ಹಣವನ್ನು ಖರ್ಚು ಮಾಡಿದರೆ ನಾವು ಬೇರೆ ಪ್ರದೇಶಗಳ ಜೊತೆಯಲ್ಲಿ ಅದಕ್ಕೆ ಸರಿಸಮಾನವಾಗಿ ಬರಬಹುದು ಎನ್ನತಕ್ಕ ದೃಷ್ಟಿಯಿಂದ in addition to budgetory support, ಇದನ್ನು ಮಾಡಿದ್ದು. ಆದರೆ ದುರಾದೃಷ್ಟವಶಾತ್ ಏನಾಗಿದೆ ಎಂದರೆ ಹೆಚ್.ಕೆ.ಡಿ.ಬಿ. ಹಣ ಹೈದರಾಬಾದ್ ಕರ್ನಾಟಕ ಏರಿಯಾದವರಿಗೆ ಕೊಡುತ್ತಾರೆ ಎಂದು ತಿಳಿದುಕೊಂಡು ಬಜೆಟ್‌ನಲ್ಲಿ ಕೂಡ ನಮ್ಮ ಪ್ರಾವಿಷನ್ ಕಡಿಮೆಯಾಗುತ್ತಾ ಇದೆ. ಈ ಪಿ.ಡಬ್ಲ್ಯೂಡಿ